ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 2, May-June 2024, Pp. 19-25
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಕನ್ನಡ ಸಾಹಿತ್ಯ ಮತ್ತು ಗೀತ-ನೃತ್ಯ ರೂಪಕಗಳು

**ಲಕ್ಷ್ಮಿ ಎ.ಎಂ**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಕಲಾ ಕಾಲೇಜು, ಚಿತ್ರದುರ್ಗ.

**Abstract:**

*ಕಾವ್ಯೇಷು ನಾಟಕಂ ರಮ್ಯಂ" ಎಂಬ ಮಾತು 'ಕಾವ್ಯಕ್ಕಿಂತಲೂ ನಾಟಕವೇ ಸೊಗಸಾದುದು' ಎಂಬುದನ್ನು ಹೇಳುತ್ತದೆ. ಭಾರತೀಯ ನಾಟಕ ರಂಗವು ಕ್ರಿ.ಪೂ. 3 ಅಥವಾ 4 ನೇ ಶತಮಾನದಷ್ಟು ಪ್ರಾಚೀನವಾದುದು ಎಂದು ಬೌದ್ಧಧರ್ಮ ಗ್ರಂಥಗಳಲ್ಲಿ ದೊರೆಯುವ ಆಧಾರಗಳ ಮೇಲೆ ವಿದ್ವಾಂಸರೊಬ್ಬರು ಅಭಿಪ್ರಾಯಿಸಿದ್ದಾರೆ. ಸುಮಾರು ಕ್ರಿ.ಪೂ. 5 ನೇ ಶತಮಾನಕ್ಕಾಗಲೇ ಶಿಲಾಲಿ, ಕೃಶಾಶ್ವರ ನಟಸೂತ್ರಗಳು, ಪಾಣಿನಿ, ಪತಂಜಲಿಯ ಕೃತಿಗಳು ನಾಟಕಗಳ ಮೇಲೆ ಬೆಳಕು ಚೆಲ್ಲುತ್ತವೆ. ಈಗ ಸಿಕ್ಕಿರುವ ನಾಟ್ಯ ಗ್ರಂಥಗಳಲ್ಲಿ ಭರತನೇ ನಾಟ್ಯಶಾಸ್ತ್ರವೇ ಪ್ರಾಚೀನವಾದುದಾಗಿದೆ. ಈತನನ್ನು ಭಾರತೀಯ ನಾಟ್ಯಶಾಸ್ತ್ರದ ಪಿತಾಮಹಾ ಎಂದೇ ಗುರುತಿಸಲಾಗಿದೆ. ನಾಟ್ಯದ ಉತ್ಪತ್ತಿ, ಅದರ ಪ್ರಯೋಗ, ರಂಗವೇದಿಕೆಯ ರಚನೆ, ಮೊದಲಾದವುಗಳನ್ನು ಕುರಿತು ತನ್ನ ನಾಟ್ಯಶಾಸ್ತ್ರದಲ್ಲಿ ವಿವರಿಸಿದ್ದಾನೆ. ನಾಟಕವು ಪ್ರದರ್ಶನ ಕಲೆಯಾಗಿದ್ದು, ರಂಗಕಲೆಯ ಒಂದು ಪ್ರಕಾರವಾಗಿದೆ. ಇದು ಶ್ರವ್ಯ ಮತ್ತು ದೃಶ್ಯ ಮಾಧ್ಯಮಗಳೆರಡನ್ನೂ ಒಳಗೊಂಡಿದೆ. ಹೀಗೆ ಭಾರತೀಯ ನಾಟಕದ ಇತಿಹಾಸವು ಕ್ರಿ.ಪೂ. ದಿಂದ ಆರಂಭವಾಗಿ ಆಧುನಿಕ ರಂಗಭೂಮಿಯವರೆಗೂ ತನ್ನ ಛಾಪನ್ನು ಮೂಡಿಸಿದೆ. ಪ್ರಸ್ತುತ ಲೇಖನದಲ್ಲಿ ಕನ್ನಡ ಸಾಹಿತ್ಯ ಮತ್ತು ಗೀತ-ನೃತ್ಯ ರೂಪಕಗಳ ಕುರಿತು ಚರ್ಚಿಸಲಾಗಿದೆ.*

**Keywords:** *ಕನ್ನಡ ಸಾಹಿತ್ಯ, ಗೀತ-ನೃತ್ಯ ರೂಪಕಗಳು, ರಂಗಕಲೆಗಳು, ನಾಟ್ಯಶಾಸ್ತ್ರ.*

## ಪೀಠಿಕೆ

ಸಂಸ್ಕೃತದಲ್ಲಿ ದೃಶ್ಯಕಾವ್ಯಕ್ಕೆ 'ರೂಪಕ' ಎನ್ನುವರು. ರೂಪಕಗಳ ಹಲವು ಪ್ರಕಾರಗಳಲ್ಲಿ ನಾಟಕವೂ ಒಂದಾಗಿದೆ. ಆದರೆ ಕನ್ನಡದಲ್ಲಿ ನಾಟಕವನ್ನು ವಿಶಾಲ ಅರ್ಥದಲ್ಲಿ ಬಳಸಿ ನಾಟಕಗಳ ಪ್ರಕಾರಗಳಲ್ಲಿ ಒಂದಾಗಿ ರೂಪಕಗಳನ್ನು ಕಾಣುತ್ತೇವೆ. ಭರತನ ಕಾಲದಿಂದಲೂ ಈ ರೂಪಕಗಳ ಬಗ್ಗೆ ವ್ಯಾಪಕ ಚರ್ಚೆ ನಡೆದಿದೆ. ಭರತನು ನಾಟ್ಯಶಾಸ್ತ್ರದಲ್ಲಿ ಹತ್ತು ರೂಪಕಗಳನ್ನು, ಧನಂಜಯನು ತನ್ನ 'ದಶರೂಪಕ'ದಲ್ಲಿ ಇಪ್ಪತ್ತು ರೂಪಕಗಳನ್ನು, ಅಗ್ನಿಪುರಾಣದಲ್ಲಿ ಇಪ್ಪತ್ತೇಳು ರೂಪಕಗಳನ್ನು ಹೇಳಿರುವುದುಂಟು. ಒಟ್ಟಾರೆ ರೂಪಕ ಎಂದರೆ "ದೃಶ್ಯ ಕಾವ್ಯವಾದ ನಾಟಕ" ಎನ್ನಬಹುದು. ಈ ರೂಪಕಗಳಲ್ಲಿ "ಗೀತ-ನೃತ್ಯ ರೂಪಕಗಳು ಹಾಗೂ ನೃತ್ಯ ರೂಪಕಗಳು" ಎಂಬ ಪ್ರಮುಖ ಪ್ರಕಾರಗಳನ್ನು ಗುರುತಿಸಲಾಗಿದೆ. ನಾಟಕಗಳಲ್ಲಿ ಬರೀ ಹಾಡುಗಳನ್ನೇ ಜೋಡಿಸಿ ಅಭಿನಯಿಸಲು ಅನುವಾಗುವಂತೆ ರಚಿಸಿದ ರೂಪಕಗಳೇ ಗೀತ-ನೃತ್ಯ ರೂಪಕಗಳು, "ಹಾಡುಗಳಿಲ್ಲದೆ ಬರಿ ಸಂಗೀತ ಸ್ವರ ವಿನ್ಯಾಸಗಳಿಂದ ರಂಜಿತವಾದ ರೂಪಕಗಳೇ "ನೃತ್ಯ ರೂಪಕಗಳು".

**Please cite this article as:** ಲಕ್ಷ್ಮಿ ಎ.ಎಂ. (2024). ಕನ್ನಡ ಸಾಹಿತ್ಯ ಮತ್ತು ಗೀತ-ನೃತ್ಯ ರೂಪಕಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 3(2), 19–25

ಇವು ಪಾಶ್ಚಾತ್ಯರಲ್ಲಿ ಉಂಟು, ನಮ್ಮಲ್ಲಿ ಇಲ್ಲವೆಂದೇ ಹೇಳಬೇಕು.

ಗೀತ–ನೃತ್ಯ ರೂಪಕಗಳು ಭಾರತೀಯರಿಗೆ ಹೊಸದಾದ ಕಲೆಯೇನೂ ಅಲ್ಲ. ಈಗಾಗಲೇ ಹೇಳಿದಂತೆ ಇವುಗಳ ಮೂಲವನ್ನು ಕ್ರಿ.ಪೂ.ದ ಆರಂಭದಿಂದಲೇ ಗುರುತಿಸಬಹುದು. ಕಾಳಿದಾಸನ 'ವಿಕ್ರಮೋರ್ವಶೀಯ'ದ 4ನೇ ಅಂಕದಲ್ಲಿ, 12ನೇ ಶತಮಾನದ ಜಯದೇವನ 'ಗೀತಗೋವಿಂದ'ದಲ್ಲಿ, 16ನೇ ಶತಮಾನದ ಯತಿನಾರಾಯಣ ತೀರ್ಥರ 'ಕೃಷ್ಣ ಲೀಲಾ ತರಂಗಿಣಿ'ಯಲ್ಲಿ, 18ನೇ ಶತಮಾನದ ತ್ಯಾಗರಾಜರ 'ಪ್ರಹ್ಲಾದ ವಿಜಯ'ದಲ್ಲಿ, 19ನೇ ಶತಮಾನದ ಗೋಪಾಲಕೃಷ್ಣ ಭಾರತಿ ಅವರ 'ನಂದನಾರ್ ಚರಿತೆ' (ತಮಿಳು) ಮೊದಲಾದ ಕೃತಿಗಳಲ್ಲಿ ಪ್ರಾಚೀನ ರೂಪದ ರೂಪಕಗಳನ್ನು ಗುರುತಿಸಿದರೆ, ಕರ್ನಾಟಕದ ಯಕ್ಷಗಾನ, ಕೇರಳದ ಕಥಕ್ಕಳಿ, ಆಂಧ್ರದ ಕೂಚುಪುಡಿ, ತಮಿಳನಾಡಿನ ಭರತ ನಾಟ್ಯಗಳಲ್ಲಿ ಆಧುನಿಕ ಗೀತರೂಪಕಗಳ ಚಹರೆಗಳನ್ನು ಗುರುತಿಸಬಹುದು.

ಕನ್ನಡ ಸಾಹಿತ್ಯದಲ್ಲಿ ಗೀತ ರೂಪಕಗಳು ಸ್ವರೂಪ

ಪಾಶ್ಚಾತ್ಯ 'ಒಪೆರಾ' ಗಳನ್ನು ಹೋಲುವ ಗೀತ–ನೃತ್ಯ ರೂಪಕಗಳಿಗೆ ಕನ್ನಡ ಸಾಹಿತ್ಯದಲ್ಲಿ 'ಶಿವರಾಮ ಕಾರಂತರು ಹಾಗೂ ಪು.ತಿ.ನ' ಅವರನ್ನು ಮೂಲಪುರುಷರು ಎಂದು ಗುರುತಿಸಬಹುದು. ಅವರೇ ಇವುಗಳ ಪ್ರಯೋಗಶೀಲರು. ಅವರ ನಂತರ ಈ ರೀತಿಯ ಪ್ರಯೋಗಗಳಿಗೆ ಬಹತೇಕ ಯಾರೂ ಕೈ ಹಾಕಲಿಲ್ಲ ಎನ್ನಬಹುದು. ಗೀತ ನೃತ್ಯ ನಾಟಕಗಳ ಕಲ್ಪನೆ ತನ್ನಲ್ಲಿ ಮೊಳಕೆ ಹೊಡೆದ ಸಂದರ್ಭವನ್ನು ಕಾರಂತರೇ ತಮ್ಮ 'ಸ್ಮೃತಿ ಪಟಲ'ದಲ್ಲಿ ಹೀಗೆ ವಿವರಿಸುತ್ತಾರೆ. ಶಿವರಾಮ ಕಾರಂತರು ಆಗ ಪುತ್ತೂರಿನಲ್ಲಿ ನಡೆಯುತ್ತಿದ್ದ ದಸರಾ ಉತ್ಸವದ ಸಂದರ್ಭದಲ್ಲಿ ನಡೆಸಲಾಗುತ್ತಿದ್ದ ಕಾರ್ಯಕ್ರಮಗಳನ್ನು ಆಯೋಜಿಸುವಾಗ ಕಾರಂತರು ಪಾತ್ರವರ್ಗಕ್ಕೆ ಹೆಚ್ಚು ಶ್ರಮ ಮತ್ತು ಅಭ್ಯಾಸ ಬೇಕಿರದ ಒಂದು ನಾಟಕದ ಮಾದರಿಯನ್ನು ಹುಡುಕಬೇಕಾದ ಅನಿವಾರ್ಯತೆ ಒದಗಿಬಂದಿತು. ಆ ಸಂದರ್ಭದಲ್ಲಿ ಅವರ ಆಲೋಚನೆಗೆ ಹೊಳೆದದ್ದೇ ಗೀತ ರೂಪಕ. ಕಾರಣ ಪೌರಾಣಿಕ ವಸ್ತುವಿನ ಕಥೆಯನ್ನೋ, ಸನ್ನಿವೇಶವನ್ನು ಇರಿಸಿಕೊಂಡು ಅದಕ್ಕೆ ಅನುಗುಣವಾಗಿ ಪದ್ಯಗಳ ರಚನೆಯನ್ನು ಮಾಡಿ, ಪರದೆಯ ಹಿಂದೆ ಹಿಮ್ಮೇಳದವರ ಮೂಲಕ ಅಥವಾ ವಾದ್ಯವೃಂದಗಳ ಮೂಲಕ ಅವುಗಳನ್ನು ಹಾಡಿಸಿದರೆ ಅದಕ್ಕೆ ತಕ್ಕ ಅಭಿನಯವನ್ನು ವೇಷಧಾರಿಯಾದ ಪಾತ್ರಗಳು ಬಂದು ಮಾಡುತ್ತವೆ ಎಂಬ ಆಲೋಚನೆ ಹೊಳದದ್ದೇ ಆಗ. ಅಲ್ಲಿಂದ ಅವರ ಗೀತ ನೃತ್ಯ ನಾಟಕಗಳ ಯುಗ ಆರಂಭವಾಯಿತು ಎನ್ನಬಹುದು.

ಕಾರಂತರು ಗೀತ ನಾಟಕಗಳ ರಚನೆಯ ಆರಂಭದ ಕಾಲದಲ್ಲಿ ಅವರೇ ಹಾಡುಗಳನ್ನು ಬರೆಯುತ್ತಿದ್ದರು. ನಾಟಕ ಪ್ರದರ್ಶನ ಸಂದರ್ಭದಲ್ಲಿ ಅವನ್ನು ಕೈಯಲ್ಲಿ ಹಿಡಿದುಕೊಂಡು ಓದಬಹುದಿತ್ತು. ಪ್ರೇಕ್ಷಕರಿಗೆ ಸಾಹಿತ್ಯವು ಅರ್ಥಪೂರ್ಣ ಆಗಿದ್ದು, ಅಲ್ಲಿನ ವಿಚಾರಗಳು ಮನಸ್ಸಿನ ಆಳಕ್ಕೆ ಇಳಿಯಬಲ್ಲವಾಗಿದ್ದರೆ, ಅವರಿಗೆ ಹಿಮ್ಮೇಳದವರು ಕಾಣಿಸದೇ ಇದ್ದರೂ ಪ್ರೇಕ್ಷಕರು ಗೀತೆಯ ಮಾತುಗಳ ಕಡೆಗೆ ಗಮನ ಕೊಡುತ್ತಾರೆ ಎಂಬ ಆಲೋಚನೆ ಕಾರಂತರದ್ದು. ಕಾರಂತರು ತಮ್ಮ ಗೀತೆಗಳಿಗೆ ಬಹುತೇಕ ಹಿಂದೂಸ್ಥಾನಿ ರಾಗಗಳನ್ನೇ ಬಳಸಿಕೊಂಡಿದ್ದಾರೆ. ಆದರೆ ಕೀಚಕ ಸೈರೇಂಧ್ರಿ ನಾಟಕದಲ್ಲಿ ಮಾತ್ರ ಕರ್ನಾಟಕೀ ಪದ್ಧತಿಯ ಸಿಂಹೇಂದ್ರ ಮಧ್ಯಮ ರಾಗವನ್ನ ಬಳಸಿಕೊಂಡಿದ್ದಾರೆ. ಕಾರಂತರ ಆರಂಭದ ಪ್ರಯೋಗಗಳಲ್ಲಿ ದ್ವಿಪದಿ, ಚೌಪದಿಗಳಂತಹ ಛಂದಸ್ಸನ್ನು ಬಳಕೆ ಮಾಡಿದ್ದಾರೆ.

**ಕಾರಂತರ ಗೀತ ರೂಪಕಗಳು**

ಕಾರಂತರು ರಚಿಸಿದ ಕೆಲವು ಗೀತ ನೃತ್ಯ ನಾಟಕಗಳ ಕೆಲವೊಂದು ಹಾಡುಗಳನ್ನು ಅಧ್ಯಯನಕ್ಕಾಗಿ ಈ ಮುಂದಿನಂತೆ ನೋಡಬಹುದು. ಪುತ್ತೂರಿನಲ್ಲಿ ಕಾರಂತರು ಬರೆದು ಆಡಿಸಿದ "ಪರಿವರ್ತನಾ ಭಾರತ" ದ ಒಂದು ಹಾಡು.

ಭಾರತಕ್ಕೆ ಬಂದು ನೆಲೆಸಿ ಬದುಕಿ ಬಾಳಿದ ವಿವಿಧ ಜನರ ಕಥಾನಕವನ್ನು ಈ ರೂಪಕದಲ್ಲಿ ದ್ವಿಪದಿ ರೂಪದ ಗೀತೆಗಳಲ್ಲಿ ಚಿತ್ರಿಸಿದ್ದಾರೆ.

***"ನೋಡಲ್ಲಿ ಬರುತಿಹನು ಬಿಲ್ಲು ಬಾಣವ ಹಿಡಿದು***
***ನಾಡಿಗರ ಹಿರಿಯರ್ಗೆ ಮುತ್ತಾತನವನು***
***ಕೋಲವೆಂಬುದು ಕುಲವು ಕಾಡು ಗುಡ್ಡವೆ ನೆಲೆಯು***
***ಬಿಲ್ಲು ಬಾಣಗಳುಣಿಸನೀವ ಸಾಧನವು"***

ಈ ಗೀತ ರೂಪಕದಲ್ಲಿ ನಮ್ಮ ಭಾರತೀಯ ಸಂಸ್ಕೃತಿಯ ಮೇಲೆ ಪ್ರಭಾವ ಬೀರಿದ ಹಲವಾರು ಪ್ರಮುಖ ವ್ಯಕ್ತಿಗಳು ಏಕಕಾಲಕ್ಕೆ ಬಂದು ಹೋಗುತ್ತಾರೆ. ದ್ರಾವಿಡ ಯುಗ, ಆರ್ಯ ಯುಗ, ಬೌದ್ಧಯುಗ, ಅಶೋಕನ ಕಾಲಾವಧಿ, ಮುಸಲ್ಮಾನರ ದಾಳಿ, ಬ್ರಿಟಿಷರ ಆಗಮನ, ಅವರಿಂದ ಸ್ವಾತಂತ್ರ್ಯ ಹರಣ – ಮೊದಲಾದ ವಿಚಾರಗಳನ್ನು ಈ ರೂಪಕದಲ್ಲಿ ಚಿತ್ರಿಸಲಾಗಿದೆ. ಇವೆಲ್ಲವನ್ನೂ ಇಬ್ಬರು ಮೂವರು ನಟರು ಕೋಲರಂತೆ ವೇಷಭೂಷಣಗಳನ್ನು ಧರಿಸಿ ರಂಗಸ್ಥಳಕ್ಕೆ ಬಂದು ಅಭಿನಯಿಸಿ ಪರಿಣಾಮಕಾರಿಯಾಗಿ ತೋರಿಸಿ ಹೋಗುತ್ತಾರೆ.

ಸ್ವಾತಂತ್ರ್ಯ ಪೂರ್ವದ ಅವಧಿಯಲ್ಲಿ ರಚನೆಯಾದ ಕಾರಂತರ ರಚನೆಯ ಮತ್ತೊಂದು ಗೀತನೃತ್ಯ ರೂಪಕ 1931 ರಲ್ಲಿ ರಚನೆಯಾದ "ಮುಕ್ತದ್ವಾರ". ಇದು ಕಾರಂತರ ಒಂದು ಯಶಸ್ವಿ ರಂಗಪ್ರಯೋಗ ಆಗಿದೆ. ಇದರಲ್ಲಿ 'ಕಾಲ' ಎಂಬ ಪುರುಷನು ಹಿಂದಿನ ಯುಗದ ಮೇಲೆ ಪರದೆಯನ್ನು ಹೊದಿಸಿ, ಹೊಸ ಯುಗವನ್ನು ಆಗಾಗ ತರಿಸುತ್ತಾನೆ ಎಂಬ ಕಥಾನಕವು

***"ಹೆಜ್ಜೆ ಗೆಜ್ಜೆದನಿಯ ಮಾಡಿ ಬರುತಿದಾನೆ***
***ನೆನಪಿಗೊಂದು ತೆರೆಯ ಹಾಸಿ ಸರಿಯುತಾನೆ***
***ತನ್ನ ಬೆಡಗನ್ನೆಲ್ಲ ತೋರಿ ನಡೆಯುತಾನೆ***
***ನಿನ್ನೆ ದಿನವನಳಿಸಿಬಿಟ್ಟು ಸರಿಯುತಾನೆ***
***ಕಾಲವೆಂಬ ಲೀಲೆ ನೀನು***
***ಮೇಲು ಕೀಳು ಒಂದೆ ಸಮನು***
***ಕಾಲತುಳಿತದೆಮ್ಮ ಜಗವ***
***ಕುಣಿಸಿ ದಣಿಸಿ ಬಿಡುವೆಯೇನು!"***

ಇದರಲ್ಲಿ ಮೂಡಿಬಂದಿದೆ.

ತನ್ನ ಕಂದನನ್ನು ಕಳೆದುಕೊಂಡಿರುವ ಗೋತಮಿಯು ತನ್ನ ಮಗನನ್ನು ಯಾರಾದರೂ ಬದುಕಿಸಬಲ್ಲರೇ ಎಂದು ಹಲುಬುವ ಒಂದು ದೃಶ್ಯ 'ಕಿಸಾಗೋತಮಿ' ರೂಪಕದಲ್ಲಿ ಮೂಡಿಬಂದಿದೆ. ಸಾವಿಲ್ಲದ ಮನೆಯಿಂದ ಸಾಸಿವೆಯ ತಂದರೆ ಆ ಕಂದನನ್ನು ಬದುಕಿಸುವೆ ಎಂಬ ಬುದ್ಧನ ಮಾತನ್ನು ಕೇಳಿ ಆಸೆಯಿಂದ ಮನೆ ಮನೆಗೂ ಹೋಗಿ ಬೇಡಿ ನಂತರ ಸಾವಿಲ್ಲದ ಮನೆಯಿಲ್ಲ ಎಂಬ ಸತ್ಯವನ್ನು ತಿಳಿಸಿ ಮನದಟ್ಟು ಮಾಡಿಕೊಡುವ ಮೂಲಕ ಬುದ್ಧನು ಆ ತಾಯಿಗೆ ಸಮಾಧಾನ ಮಾಡುವ ಕಥಾನಕವೇ ಮನಸೆಳೆಯುವಂತದ್ದು.

***"ಹಗಲೆಲ್ಲ ಕತ್ತಲಾಯ್ತು***
***ಬಾಳೆಲ್ಲ ಬರಿದಾಯ್ತು***
***ಜಗವೆಲ್ಲ ಮಾಯವಾಯ್ತು***
***ಬೆಳಗಿಪರು ಯಾರದನು?***
***ತೊಳಗಿಪರು ಯಾರದನು?"***

ಎಂಬ ಗೋತಮಿಯ ಮನಕಲುಕುವ ರೋದನ ಪದ್ಯ.

'ಬುದ್ಧೋದಯ'ವು ಕಾರಂತರು ರಚಿಸಿದ ಮತ್ತೊಂದು ಗೀತನಾಟಕ. ಅರಮನೆಯಲ್ಲಿ ವೈಭೋಗದ ಸುಖ ಜೀವನವನ್ನು ನಡೆಸುತ್ತಿದ್ದ ಸಿದ್ಧಾರ್ಥನಿಂದ ದೃಶ್ಯ ಮೊದಲುಗೊಂಡು, ಮತ್ತೊಂದರ ದೃಶ್ಯದಲ್ಲಿ ಸಾರಥಿ ಚೆನ್ನ ನೊಂದಿಗೆ ವಾಯುವಿಹಾರಕ್ಕೆ ಹೋದಾಗ ಸಿದ್ಧಾರ್ಥನಿಗೆ ಎದುರಾಗುವ ಒಬ್ಬ ಮುದುಕ, ಕುಷ್ಠರೋಗಿ, ಶವದ ದೃಶ್ಯಗಳು ಅವನನ್ನು ವೈಭೋಗದ ಜೀವನದಿಂದ ವಿಮುಕ್ತಿಹೊಂದಿ, ಅರಮನೆ ಹಾಗೂ ಸಂಸಾರವನ್ನು ತೊರೆದು, ತನ್ನ ದೀರ್ಘ ಚಿಂತನೆಗಳ ಮೂಲಕ ಬುದ್ಧನ ಉದಯವಾಗುವುದನ್ನು ಚಿತ್ರಿಸುತ್ತದೆ. 'ಕಿಸಾಗೋತಮಿ ಮತ್ತು ಬುದ್ಧೋದಯ' ಈ ಎರಡು ರೂಪಕಗಳು ಕಾರಂತರ' ಚಾರಿತ್ರಿಕ ರೂಪಕ'ಗಳಾಗಿವೆ.

ಒಂದು ಗಂಟೆಯ ಕಾಲಾವಧಿಯ ಪೌರಾಣಿಕ ಕಥಾವಸ್ತುವನ್ನೊಳಗೊಂಡ ಮತ್ತೊಂದು ರೂಪಕ 'ಸಾವಿತ್ರಿ ಸತ್ಯವಾನ'. ಸತ್ಯವಾನನು ಸಾವಿತ್ರಿಯ ತಂದೆಯ ಆಶ್ರಮಕ್ಕೆ ಬಂದಾಗಿನಿಂದ ಕಥೆ ಆರಂಭವಾಗುತ್ತದೆ. ಸತ್ಯವಾನನ್ನು ಮೋಹಿಸುವ ಸಾವಿತ್ರಿಗೆ ನಾರದರು ಆತ ಅಲ್ಪಾಯುಷಿ ಎಂದು ತಿಳಿಸಿದರೂ ಆತನನ್ನು ಮದುವೆಯಾಗುವ, ಆತನ ಪ್ರಾಣ ಸೆಳೆಯಲು ಬಂದ ಯಮನೊಂದಿಗೆ ಪತಿಗೆ ಜೀವಭಿಕ್ಷೆಯನ್ನು ಪಡೆಯುವವರೆಗೂ ಇದರಲ್ಲಿ ಕಥೆ ನಿರೂಪಿತವಾಗಿದೆ.

**ಕಾರಂತರ ಜಾನಪದ ಗೀತನಾಟಕಗಳು**

ತುಳು ಮತ್ತ ಕನ್ನಡ ಜಾನಪದ ಗೀತೆಗಳಿಂದ ಪ್ರಭಾವಿತರಾದ ಕಾರಂತರು 'ಜಾನಪದ ಗೀತನಾಟಕ'ಗಳನ್ನು ಬರೆದಿರುವುದುಂಟು. ಅವುಗಳಲ್ಲಿ ಹೆಸರಿಸಬಹುದಾದವು "ಸೋಮಿಯ ಸೌಭಾಗ್ಯ" ಮತ್ತು "ಯಾರೋ ಅಂದರು". ಇವು ಸುಮಾರು ಸ್ವಾತಂತ್ರ್ಯ ಪೂರ್ವದಲ್ಲಿ 1936–38 ರ ಅವಧಿಯಲ್ಲಿ ರಚನೆಯಾದವು. 'ಸೋಮಿಯ ಸೌಭಾಗ್ಯ'ದ ಕಥಾ ನಾಯಕಿ 'ಸೋಮಿ'. ತನ್ನ ತಾಯಿಯನ್ನು 10 ವರ್ಷದಲ್ಲಿಯೇ ಕಳೆದುಕೊಂಡ ತನ್ನ ಮಗಳ ಸುಖಕ್ಕಾಗಿ ಸೋಮಿಯ ತಂದೆ ಮದುವೆಯಾಗದೆ ಒಂಟಿಯಾಗಿ ಆಕೆಯನ್ನು ಪ್ರೀತಿಯಿಂದ ಬೆಳೆಸುತ್ತಾನೆ. ಆಕೆಗೆ ಒಂಟಿತನ ಕಾಡದಿರಲೆಂದು 6 ವರ್ಷದ ಹುಡುಗನೊಬ್ಬನನ್ನು ತನ್ನ ಮನೆಗೆ ಆಕೆಗೆ ಗೆಳೆಯನಾಗಿ ಕರೆತರತ್ತಾನೆ. ಆದರೆ ಬೆಳ ಬೆಳಯುತ್ತಾ ಇಬ್ಬರು ಒಬ್ಬರಿಗೊಬ್ಬರು ಪ್ರೀತಿಸುತ್ತಾರೆ. ವಯಸ್ಸಿಗೆ ಬಂದ ಸೋಮಿಗೆ ತಂದೆ ಬೇರೊಬ್ಬ ಯೋಗ್ಯ ಹುಡುಗನಿಗೆ ಮದುವೆ ಮಾಡಿಕೊಡುವ ಸಂದರ್ಭ, ಮದುವೆಯಾದರೂ ಸಹ ಸೋಮಿ ತನ್ನ ದೇಹವನ್ನು ಗಂಡನಿಗೆ ಒಪ್ಪಿಸಿದರೂ ತನ್ನ ಮನಸ್ಸನ್ನು ಕೊಡಲಾರದ ಸ್ಥಿತಿ ಎದುರಿಸುತ್ತಾಳೆ. ನಾಟಕದ ಅಂತ್ಯ ದುರಂತಾಗಿದ್ದು, ಸೋಮಿಯ ಹೆರಿಗೆ ಸಂದರ್ಭದಲ್ಲಿ ಆಕೆ ಬದುಕಲಾರದ ಸ್ಥಿತಿಯನ್ನು ತಿಳಿದ ಆಕೆಯ ಗಂಡ ಆಕೆಯ ಮನದ ಕೊರಗನ್ನು ತಿಳಿಯುತ್ತಾನೆ. ಅದರಂತೆ ವಿವಾಹ ಪೂರ್ವದ ಆಕೆ ಪ್ರಣಯಿಯನ್ನು ಕರೆಯಿಸುತ್ತಾನೆ. ತನ್ನ ಅಂತಿಮ ದಿನಗಳಲ್ಲಿ ಅವನ ಮುಖವನ್ನು ನೋಡಿ ಸಂತೋಷದಿಂದ ಸಾಯುವ ಸೋಮಿಯ ಕಥೆ ಇಲ್ಲಿ ಚಿತ್ರಣವಾಗಿದೆ.

"ಯಾರೋ ಅಂದರು"– ಈ ಗೀತ ರೂಪಕವು ಸಹ ಕಾರಂತರಲ್ಲಿ ಜಾನಪದ ಪ್ರೇರಣೆಯಿಂದಲೇ ಹುಟ್ಟಿದ್ದು. ಇದರಲ್ಲಿನ ಒಂದು ಗೀತೆ –

***"ನೀರಿಗೆ ಹೋದಾಗ ಸೂರಕ್ಕ ಮೊನ್ನೆ***
***ಜಾರಿ ಬಿದ್ದಳಂತೆ***
***ನೀರಿಗೆ ಜಾರಿ ಬಿದ್ದಳಂತೆ***
***ನೀರೇನೂ ಕೆರೆಯೊಳಗೆ ಇದ್ದಿಲ್ಲವಂತೆ***
***ನೀರಿಲ್ಲದ ಕೆರೆಯಲ್ಲಿ ಬರಿ ಕೆಸರಂತೆ***
***ಕೆಸರೊಳಗೆ ಮುಳುಗಿ ಹೋಗಿದ್ದಳಂತೆ***
***ಬಿರುಮಣ್ಣ ಓಡ್ಬಂದು ಕೈ ಕೊಟ್ಟನಂತೆ***
***ಮೇಲೆತ್ತಿ ಕಾಂಬಾಗ ಬರಿ ಹೆಣವಂತೆ"***

ನಿರಾಧಾರವಾದ ಸುದ್ಧಿಯೊಂದು ಜನರ ಬಾಯಿಯಿಂದ ಬಾಯಿಗೆ ಕಿವಿಯಿಂದ ಕಿವಿಗೆ ಸಂಚರಿಸುವ ಕಥೆಯನ್ನು ಒಳಗೊಂಡಿದೆ. ಸೂರಕ್ಕ ಮತ್ತು ಆಕೆಯ ಗಂಡ ಬಿರುಮಣ್ಣನ ವಿಚಾರದಲ್ಲಿ ಅಪವಾದಗಳು ಹುಟ್ಟುವ ಹರಡುವ ರೀತಿಯನ್ನು ತಿಳಿಹಾಸ್ಯದ ಮೂಲಕ ಇದರಲ್ಲಿ ಪ್ರಸ್ತುತಪಡಿಸಲಾಗಿದೆ.

1960 ರ ಸುಮಾರಿಗೆ ಕಾರಂತರ ರಚಿಸಿದ 'ಕೀಚಕ ಸೈರೇಂಧ್ರಿ' ಎಂಬುದು ಇವರು ರಚಿಸಿದ ಕೊನೆಯ ಗೀತನಾಟಕ. ಇದು ಮಹಾಭಾರತದ ಪಾಂಡವರ ಅಜ್ಞಾತವಾಸದ ಕಥಾನಕ. ಬಹುತೇಕ ಈ ಕಾಲಾವಧಿಯ ಹೊತ್ತಿಗೆ ಅವರ ಕಾರಂತರ ಗೀತ ನಾಟಕ ಪ್ರಯೋಗಗಳು ಮುಗಿದವು ಎಂದು ಸ್ವತಃ ಕಾರಂತರೇ ಹೇಳಿದ್ದಾರೆ. ಕಾರಂತರು ತಮ್ಮ ಗೀತನಾಟಕಗಳಲ್ಲಿ ಹೆಚ್ಚಾಗಿ ಬಳಸಿದ ವಾದ್ಯಗಳು ಪಿಟೀಲು, ದಿಲ್ರುಬಾ, ಕೊಳಲು, ಚೆಂಡೆ ಮೊದಲಾದವು. ಹೀಗೆ ಇವರ ಒಂದೊಂದು ರೂಪಕವೂ ಹಲವು ವಸ್ತು, ತಂತ್ರ, ವಿಚಾರಗಳಿಂದ

ಪ್ರೇರಣೆ ಪಡೆದವುಗಳೇ ಆಗಿದ್ದುವು. ಎಲ್ಲವೂ ನವೀನ ಪ್ರಯೋಗಗಳ ಆಗರವೇ ಆಗಿದ್ದಿತು.

**ಪು.ತಿ.ನ ರವರ ಗೀತರೂಪಕಗಳು**

ಗೀತ ನೃತ್ಯ ರೂಪಕಗಳಿಗೆ ಹೆಸರಾದ ಮತ್ತೊಬ್ಬ ಪ್ರಮುಖರೆಂದರೆ ಪು.ತಿ.ನ. ಅವರು. ಇವರು ಕವಿಯಾಗಿ, ಗೀತನಾಟಕಕಾರರಾಗಿ, ಪ್ರಬಂಧರಚನಾಕಾರರಾಗಿ ಬಹುದೊಡ್ಡ ಹೆಸರು. ಇವರ ಗೀತನಾಟಕಗಳು ಕನ್ನಡ ಸಾಹಿತ್ಯ ಜಗತ್ತಿನಲ್ಲಿ ವಿಶಿಷ್ಟವಾದ ಸ್ಥಾನವನ್ನು ಪಡೆದುಕೊಂಡಿವೆ. "ಗೋಕುಲ ನಿರ್ಗಮನ, ಅಹಲ್ಯೆ, ಸತ್ಯಾಯನ ಹರಿಶ್ಚಂದ್ರ, ಹಂಸ ದಮಯಂತಿ, ಶಬರಿ, ವಿಕಟಕವಿ ವಿಜಯ" ಮೊದಲಾದವು ಇವರ ರಚನೆಯ ಗೀತನಾಟಕಗಳು. ಇವರ ಗೀತನಾಟಕಗಳೆಲ್ಲಾ ಸ್ವರಸಹಿತ ರಾಗ ಹಾಗೂ ತಾಳಬದ್ಧವಾಗಿವೆ. ಹಾಗೆಯೇ ಜಾನಪದ ಮಟ್ಟುಗಳಿಂದ ಹಿಡಿದು ಪ್ರೌಢ ಸಂಗೀತ ರಚನೆಗಳವರೆಗೂ – ಹಿಂದೂಸ್ತಾನಿ, ಕರ್ನಾಟಕ ಸಂಗೀತಗಳನ್ನು ಒಳಗುಮಾಡಿಕೊಂಡಿವೆ. ಹೊಸತು ಮತ್ತು ಹಳತಿನ ತಲೆಮಾರಿನ ಮನೋಧರ್ಮಗಳನ್ನು ಬಹುವಾಗಿ ಅರಿತುಕೊಂಡಿದ್ದ ಪು.ತಿ.ನ ಅವರು ಭಾವಕ್ಕೆ ತಕ್ಕಂತೆ ಮಟ್ಟುಗಳನ್ನು ಬಳಸಿದ್ದಾರೆ. ಪು.ತಿ.ನ ಅವರು ಕಾವ್ಯ ಮತ್ತು ಸಂಗೀತ ಎರಡನ್ನೂ ಮೇಳೈಸಿಕೊಂಡ ರಚನೆಕಾರರಾಗಿದ್ದರು. ಇವರು ಸಂಗೀತಕ್ಕೆ ಹಲವು ಹೊಸ ರಾಗಗಳನ್ನು ಸಹ ಕೊಡುಗೆಯಾಗಿ ನೀಡಿದ್ದಾರೆ. ಉದಾಹರಣೆ ಹರಿಣಿ, ಋತುವಿಲಾಸ, ವೃಷಭ ವಿಲಾಸ ಮೊದಲಾದವು.

ಪು.ತಿ.ನ ಅವರ ರಚನೆಗಳಲ್ಲಿ ಒಂದಾದ 'ಗೋಕುಲ ನಿರ್ಗಮನ' ವು ಬರೀ ಕನ್ನಡ ಸಾಹಿತ್ಯದಲ್ಲಿ ಮಾತ್ರ ಅಲ್ಲದೇ ಇಡೀ ಭಾರತೀಯ ಸಾಹಿತ್ಯ ರಂಗದಲ್ಲಿ ಪ್ರಮುಖ ಸ್ಥಾನವನ್ನು ಅಲಂಕರಿಸಿದೆ. ಕೃಷ್ಣನು ಗೋಕುಲವನ್ನು ಬಿಟ್ಟು ಮಥುರೆಗೆ ಹೊರಡುವ ಕಥೆಯನ್ನು ಹೊಂದಿದೆ. ಕೃಷ್ಣನ ಇಷ್ಟಪಡದೇ ಇರುವವರು ಬಹುಶಃ ಯಾರು ಇರಲಿಕ್ಕಿಲ್ಲ. ಅಬಾಲ ವೃದ್ಧರಾದಿಯಾಗಿ ಗೋಪಗೋಪಿಕೆಯರ ಒಳಗೊಂಡು ಅವನನ್ನು ಹುಚ್ಚರಂತೆ ಆರಾಧಿಸುವವರೇ ಹೆಚ್ಚು. 'ಗೋಕುಲ ನಿರ್ಗಮನ' ದಲ್ಲಿ ಬರುವ ಒಂದು ಗೀತೆಯು

*"ಅರೆ ಅಗೋ ಬಂದ*
*ಅಗೋ ಮುರುಳೀಧರನಾಹಾ*
*ನಿಡಿತೋಳೋ ಎದೆ ಹರಹೋ*
*ನಡೆಬೆಡಗೋ ನಿಲುಬಗೆಯೋ*
*ಕನಸಿಗೂ ಇಂತವ ಸುಳಿವೊಲ್ಲ!!"*

ಕೃಷ್ಣನ ಸೌಂದರ್ಯವನ್ನು ಕೊನೆಯ ಸಾಲುಗಳೇ ಇಲ್ಲಿ ಕಟ್ಟಿ ಹಾಕಿವೆ. ಮಥುರೆಯಿಂದ ಬಂದ ಅಕ್ರೂರನು ಕಂಸನ ಸಭೆಗೆ ಆಹ್ವಾನ ಬಂದಿರುವುದನ್ನು ಕೃಷ್ಣನಿಗೆ ತಿಳಿಸುವ ಸಂದರ್ಭ, ಗೋಕುಲವನ್ನು ಬಿಟ್ಟು ಶ್ರೀ ಕೃಷ್ಣನು ಹೊರಡುವ ಸಂದರ್ಭ 'ಗೋಕುಲ ನಿರ್ಗಮನ' ದಲ್ಲಿ ಗೀತ ರೂಪಕದ ಮೂಲಕ ಪು.ತಿ.ನ ಅವರು ಮನೋಜ್ಞವಾಗಿ ಚಿತ್ರಿಸಿದ್ದಾರೆ. ರೂಪಕದ ಶೀರ್ಷಿಕೆಯೂ ಅಷ್ಟೇ ಅನ್ವರ್ಥವಾಗಿದೆ. ಯಮುನೆಯ ನದಿ ತೀರದಲ್ಲಿ ಆ ರಾತ್ರಿಯಲ್ಲಿ ಕೃಷ್ಣನ ಕೊಳಲ ದನಿಗೆ ಕಾದಿರುವ ಗೋಪಗೋಪಿಕೆಯರ ದಂಡು, ಕೃಷ್ಣನ ಯಾರೂ ಮಥರೆಗೆ ಕಳುಹಿಸದ ಜನರ ಮನಸ್ಥಿತಿ, ಜೊತೆಗೆ ಕೃಷ್ಣನು ಮಥುರೆಗೆ ಹೋದರೆ ಮರಳಿ ಬಾರನೆಂಬ ವಾಸ್ತವದ ಅರಿವೂ ಅವರಿಗಿದೆ. ಇಲ್ಲಿ ಕೃಷ್ಣನ ಮೇಲಿನ ಗೋಕುಲದ ಜನರ ಪ್ರೀತಿ, ಅನುರಾಗ, ಹಾಗೂ ರಾಧೆಯ ಮಾನಸಿಕ ತಲ್ಲಣಗಳನ್ನು ಮನಮುಟ್ಟುವಂತೆ ಚಿತ್ರಿಸಲಾಗಿದೆ.

ಒಟ್ಟಾರೆ ಪು.ತಿ.ನ ಅವರ ಗೀತ ನೃತ್ಯಗಳಲ್ಲಿ ಒಂದು ಕಲೆಗಾರಿಕೆ, ಬಿಗಿ, ಗಾಂಭೀರ್ಯತೆ, ಸೊಗಸುಗಾರಿಕೆ, ರಚನೆಯಲ್ಲಿ ನವೀನತೆ, ಎಲ್ಲವೂ ಸಹ ಇದೆ.

**ಕನ್ನಡ ಗೀತ ರೂಪಕಗಳ ಲಕ್ಷಣಗಳು**

ಕಾರಂತರು, ಪು.ತಿನ ಅವರ ಗೀತ ನೃತ್ಯ ರೂಪಕಗಳನ್ನು ಗಮನಿಸಿದಾಗ ಒಟ್ಟಾರೆಯಾಗಿ ಈ ಮುಂದಿನಂತೆ ಕನ್ನಡದ ಗೀತರೂಪಕಗಳ ಲಕ್ಷಣಗಳನ್ನಾಗಿ ನೋಡಬಹುದು.

- ಗೀತ ನೃತ್ಯ ರೂಪಕಗಳು 'ಸಾಹಿತ್ಯ ಮತ್ತು ಸಂಗೀತಗಳ ಸಂಗಮ' ಎನ್ನಬಹುದು. ಆದಾಗ್ಯೂ ಇವುಗಳು ಸಾಹಿತ್ಯಕ್ಕಿಂತ ಸಂಗೀತದ ಕಡೆಗೆ ವಾಲಿರುವುದೇ ಹೆಚ್ಚು. ಇಲ್ಲಿ ಗೀತೆಗಳನ್ನುಸಾಮಾನ್ಯವಾಗಿ ಪಾತ್ರವರ್ಗ ಮತ್ತು ಹಿಮ್ಮೇಳದವರು ಹಾಡುತ್ತಾರೆ. ಸಂಗೀತವು ವಾದ್ಯಮೇಳ(ಚೆಂಡೆ, ಮದ್ದಳೆ) ಗಳ ರೂಪದಲ್ಲಿ ಗೀತ–ನೃತ್ಯ ರೂಪಕಗಳ ಆರಂಭದಿಂದ ಕೊನೆಯವರೆಗೂ ಇರುತ್ತದೆ. ವಾದ್ಯಮೇಳಗಳು ಗೀತ–ನೃತ್ಯಗಳ ಅವಿಭಾಜ್ಯ ಅಂಗವಾಗಿದೆ.
- ಗೀತ–ನೃತ್ಯ ನಾಟಕಗಳಲ್ಲಿ ಸಂಗೀತವು ಹೊಸತಾಗಿರಬೇಕು ಹಾಗೂ ಅದು ಯಾವುದೇ ಭಾವೋದ್ರೇಕಕ್ಕೆ ಅವಕಾಶ ನೀಡುವಂತಿರಬಾರದು..
- ಗೀತನೃತ್ಯ ರೂಪಕಗಳಲ್ಲಿ ಬರುವ ಪ್ರತಿಯೊಂದು ಪಾತ್ರಧಾರಿಗಳೂ ತಮ್ಮದೇ ಆದ ವೇಷಭೂಷಣಗಳ ಮೂಲಕ ಸಿಂಗರಿಸಿಕೊಂಡು ಬಂದು, ಪಾತ್ರಕ್ಕೆ ತಕ್ಕಂತೆ ಅಭಿನಯಿಸಿ ಸಾಮಾಜಿಕ ವರ್ಗವನ್ನು ರಂಜಿಸಿ ಹೋಗುತ್ತವೆ.
- ಅಭಿನಯವೇ ಈ ನಾಟಕಗಳ ತಿರುಳು. ಇದರ ಜೊತೆಗೆ ಅಭಿನಯಿಸುವ ಪಾತ್ರಗಳೇ ಹಾಡುಗಾರರಾಗಿದ್ದರೆ ಒಳ್ಳೆಯದು, ಒಂದು ವೇಳೆ ಹಾಡುಗಾರರಾಗಿಲ್ಲದಿದ್ದರೂ ಆ ಕೊರತೆಯನ್ನು ಹಿಮ್ಮೇಳದವರು, ವಾದ್ಯ ವೃಂದವರೂ ತಮ್ಮ ಸಂಗೀತದ ಮೂಲಕ ಮುಚ್ಚುತ್ತಾರೆ. ಹಾಗಾಗಿ ಸಂಗೀತವೇ ಗೀತನಾಟಕಗಳ ಹೃದಯ ಎಂದರೆ ತಪ್ಪಾಗಲಾರದು.
- ಗೀತ–ನೃತ್ಯ ರೂಪಕಗಳಲ್ಲಿ ಅತಿ ಮುಖ್ಯವಾದ ಪಾತ್ರ ಸೂತ್ರಧಾರ. ಆತನನ್ನು ಸೇನಾಪತಿ ಎನ್ನುವುದೂ ಉಂಟು. ಗೀತ–ನೃತ್ಯಗಳಲ್ಲಿನ ಪಾತ್ರದಾರಿಗಳು, ವಾದ್ಯವೃಂದದವರು, ರಂಗ ವೇದಕೆ ನಿರ್ಮಾಣ ಮೊದಲಾದುವುಗಳನ್ನು ನಿಯಂತ್ರಿಸಿ ನಿರ್ದೇಶಿಸುವವನು ಇವನೇ. ವಾಸ್ತವವಾಗಿ ಗೀತನಾಟಕಗಳ ಗೆಲುವು ಇವನ ಕೈಯಲ್ಲೇ ಇರುವುದು.
- ಗೀತ ನೃತ್ಯ ರೂಪಕಗಳಲ್ಲಿ ಮುಖ್ಯವಾಗಿ ಬುದ್ಧಿ ಭಾವಕ್ಕೆ ಆದ್ಯತೆ ನೀಡಲಾಗುವುದು. ಗೀತಾನೃತ್ಯ ಅಭಿನಯಗಳು ಭಾವ ಪ್ರಕಟಣಾ ಸಾಧನಗಳೇ ಆಗಿವೆ. ಇವು ವಾಸ್ತವಕ್ಕೆ ದೂರ ಹೋದಷ್ಟೂ ಮತ್ತಷ್ಟೂ ಶೋಭಿಸುತ್ತವೆ.
- ನವರಸಗಳನ್ನು ಸಹ ಗೀತನೃತ್ಯಗಳಲ್ಲಿ ಪ್ರದರ್ಶಿಸಬಹುದು. ಆದಾಗ್ಯೂ ಶೃಂಗಾರ, ಹಾಸ, ಕರುಣಾ ರಸಗಳು ಇವುಗಳಲ್ಲಿ ತುಂಬಾ ಪ್ರಭಾವಿಯಾಗಿ ಮೆರೆಯುತ್ತವೆ.
- ಗೀತ–ನೃತ್ಯ ನಾಟಕಗಳ ಉದ್ದೇಶ ಮನಸ್ಸನ್ನು ಶುಚಿಗೊಳಿಸುವುದು. ನಮ್ಮ ಚಿತ್ತವನ್ನು ಪೂರ್ವಾಗ್ರಹಗಳಿಂದ ಬಿಡಿಸುವುದು ಕಷ್ಟ. ಆ ಕೆಲಸವನ್ನು ಗೀತ–ನೃತ್ಯ ನಾಟಕಗಳು ಮಾಡುತ್ತವೆ.
- ಗೀತ ನೃತ್ಯ ನಾಟಕಗಳನ್ನು ಆಸ್ವಾದಿಸುವ ನಮಗೆ ಲೌಕಿಕ ಜಡಲೋಕವನ್ನು ಬಿಟ್ಟು ಬೇರೊಂದು ಲೋಕದ ಅನುಭವವನ್ನು ತಂದುಕೊಡುವಲ್ಲಿ ಗೀತರೂಪಕ ಮಂದಿರದ ಅಲಂಕಾರ, ರಂಗಸಜ್ಜಿಕೆ, ಜೊತೆಗೆ ಅಲ್ಲಿನ ವಾದ್ಯವೃಂದವು ಪ್ರಮುಖ ಪಾತ್ರ ವಹಿಸುತ್ತದೆ. ಕಾಳಿದಾಸನು ತನ್ನ'ಮಾಳವಿಕಾಗ್ನಿಮಿತ್ರ' ದಲ್ಲಿ "ಮನಸ್ಸನ್ನು ರಂಜಿಸುವ ವಾದ್ಯವನ್ನು ಎಷ್ಟು ಹೊಗಳಿದರೂ ಸಾಲದು" ಎನ್ನುತ್ತಾನೆ. ಹೀಗೆ ಇಲ್ಲಿ ಸಂಗೀತವು ನವಲೋಕದ ಹೆಬ್ಬಾಗಿಲನ್ನೇ ತೆರೆಯುತ್ತದೆ.

**ಸಮಕಾಲೀನತೆ**

ಪ್ರಸ್ತುತ ಸನ್ನಿವೇಶದಲ್ಲಿ ಆಧುನಿಕತೆಯ ಪ್ರಭಾವಕ್ಕೆ ಒಳಗಾದ ಯುವ ಸಮದಾಯವು ಪಾಶ್ಚಾತ್ಯ ಸಂಸ್ಕೃತಿ,

ಸಂಗೀತಗಳ ಕಡೆಗೆ ವಾಲುತ್ತಿದ್ದು, ಅವರಿಗೆ ನಮ್ಮ ದೇಶೀಯ ಸಂಗೀತ, ನೃತ್ಯ ನಾಟಕಗಳ ಕಡೆಗೆ ಅಭಿರುಚಿಯನ್ನು ಬೆಳೆಯಿಸಬೇಕಾದ ಅವಶ್ಯಕತೆಯಿದೆ. ಅಲ್ಲದೆ ಈಗಿನ ರಂಗಸ್ಥಳಗಳಲ್ಲಿ, ಚಲನಚಿತ್ರಗಳಲ್ಲಿ ಅಬ್ಬರದ ಸಂಗೀತ ಸಂಯೋಜನೆಯು ಯುವಕರಲ್ಲಿ ಭಾವೋದ್ರೇಕವನ್ನು ಉಂಟುಮಾಡುತ್ತಿವೆಯೇ ಹೊರತು ಭಾವೋಪಶಮನವನ್ನಲ್ಲ. ಜೊತೆಗೆ ಮನಸ್ಸನ್ನು ಆಕರ್ಷಿಸುವ ಸಂಗೀತ, ನೃತ್ಯಗಳಾಗಲೀ ಈಗ ಸಿಗುವುದು ವಿರಳವೇ. ಇವುಗಳ ಜೊತೆಗೆ ನಮ್ಮ ದೇಶೀಯ ಪರಂಪರೆಯನ್ನು ಉಳಿಸುವ ತುರ್ತು ಸಹ ನಮ್ಮ ಮೇಲೆ ಇದೆ. ಇಂತಹ ಸನ್ನಿವೇಶದಲ್ಲಿ ನಮ್ಮ ಮಕ್ಕಳಿಗೆ, ಯುವ ಜನತೆಗೆ ಅವರ ಪಠ್ಯದ ಜೊತೆಗೆ ಗೀತ ನೃತ್ಯ ನಾಟಕಗಳ ಪರಿಚಯವನ್ನು ಮಾಡಿಸುವುದು ನಮ್ಮ ಜವಾಬ್ದಾರಿಯೂ ಹೌದು, ಜೊತೆಗೆ ಇದರಿಂದ ಕಲೆಗೂ ಪ್ರೋತ್ಸಾಹ ದೊರೆತಂತಾಗುವುದು.

**ಪರಾಮರ್ಶನ ಗ್ರಂಥಗಳು**


- *ಮೈಸೂರು ವಿಶ್ವವಿದ್ಯಾಲಯದ ವಿಶ್ವಕೋಶ.* (2017). ಮೈಸೂರು ವಿಶ್ವವಿದ್ಯಾಲಯ.
- ಶಿವರಾಮ ಕಾರಂತರು. (1977). *ಸ್ಮೃತಿ ಪಟಲದಿಂದ–ಸಂಪುಟ 1.* ಐ.ಬಿ.ಹೆಚ್ ಪ್ರಕಾಶನ
- ಶಿವರಾಮ ಕಾರಂತ. (2017). *ಡಾ. ಶಿವರಾಮ ಕಾರಂತರ ಸಮಗ್ರ ನಾಟಕಗಳು–ಸಂಪುಟ 3.* ರವೀಂದ್ರ ಪುಸ್ತಕಾಲಯ.
- ಶಿವರುದ್ರಪ್ಪ ಜಿ.ಎಸ್. ಮತ್ತು ಡಾ.ಎಚ್.ಎಸ್. ವೆಂಕಟೇಶಮೂರ್ತಿ (ಸಂ.) (2002). ಪು.ತಿ.ನ ಅವರ ಸಮಗ್ರ ಗದ್ಯ ಸಂಪುಟ, ಕನ್ನಡ ಪುಸ್ತಕ ಪ್ರಾಧಿಕಾರ.
- ಶ್ರೀಕಂಠಯ್ಯ. ತೀ.ನಂ. (1953). *ಭಾರತೀಯ ಕಾವ್ಯಮೀಮಾಂಸೆ.* ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ.